ಕರ್ನಾಟಕ ಸರ್ಕಾರ
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆ
5 ನೇ ಮಹಡಿ, ಕಂದಾಯ ಭವನ, ಕೆ.ಜಿ. ರೋಡ್, ಬೆಂಗಳೂರು-560009
ದೂರವಾಣಿ ಸಂಖ್ಯೆ : 080-22232040,22232012 ಫ್ಯಾಕ್ಸ್ : 080-22232040,ಇ-ಮೇಲ್: dssp2008@gmail.com

ಸಂಖ್ಯೆ: ಆರ್‌ಡಿ 154 ಡಿಎಸ್‌ಪಿ 2021 ದಿನಾಂಕ: 10.03.2021

ಗೆ,
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳವರಿಗೆ,

ಮಾನ್ಯರೆ,

ವಿಷಯ: ಸಾಮಾಜಿಕ ಭದ್ರತಾ ಯೋಜನೆಗಳಡಿ ಎಲ್ಲಾ ಫಲಾನುಭವಿಗಳನ್ನು ಸಂಪೂರ್ಣ DBT ವ್ಯವಸ್ಥೆಯಡಿ ತರುವ ನಿಟ್ಟಿನಲ್ಲಿ ಅಂಚೆ ಉಳಿತಾಯ ಖಾತೆ ತೆರೆಯಲಾದ ಫಲಾನುಭವಿಗಳಿಗೆ ಮಾಹಿತಿ ಒದಗಿಸುವ ಬಗ್ಗೆ.

ಉಲ್ಲೇಖ: CPMG, Karnataka circle, ಇವರ ಅ.ಸ ಪತ್ರ FS/2-33/SSP/XI, ದಿನಾಂಕ 12-02-2021

*******

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದಿಂದ ರಾಜ್ಯಾಂದ್ಯಂತ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸರ್ಕಾರವು ಮಾರ್ಚ್-2021 ರ ಅಂತ್ಯದೊಳಗೆ ಎಲ್ಲಾ ಫಲಾನುಭವಿಗಳನ್ನು DBT ವ್ಯವಸ್ಥೆಯಡಿ ತರಲು ತೀರ್ಮಾನಿಸಲಾಗಿರುವ ನಿಟ್ಟಿನಲ್ಲಿ ಅರ್ಜಿ ಸ್ವೀಕೃತಿ ಸಮಯದಲ್ಲಿಯೇ ಬ್ಯಾಂಕ್/ಅಂಚೆ ಉಳಿತಾಯ ಖಾತೆ ವಿವರ ನೀಡುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ.

ಮುಂದುವರೆದು, ಈಗಾಗಲೇ ಇ-ಮನಿಯಾರ್ಡರ್ ಮೂಲಕ ಪಿಂಚಣಿಯನ್ನು ಪಡೆಯುತ್ತಿದ್ದ ಫಲಾನಭವಿಗಳಿಗೆ ಅಂಚೆ ಉಳಿತಾಯ ಖಾತೆ ತೆರೆದು ಖಜಾನೆ-2ಗೆ ವರ್ಗಾಯಿಸಲಾಗುತ್ತಿದೆ. ಈ ರೀತಿ ವರ್ಗಾವಣೆಗೊಂಡಿರುವ ಫಲಾನುಭವಿಗಳ ಗ್ರಾಮವಾರು ವಿವರಗಳನ್ನು ಇ-ಮೇಲ್ ನಲ್ಲಿ ಕಳುಹಿಸಲಾಗಿರುತ್ತದೆ. ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ.

| ಪ್ರಸ್ತುತ ಇ-ಮನಿಯಾರ್ಡರ್ ಮೂಲಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಅಂಚೆ ಉಳಿತಾಯ ಖಾತೆ ತೆರೆದ ಜಿಲ್ಲಾವಾರು ವಿವರ | |
|---|---|
| ಜಿಲ್ಲೆ | ಫಲಾನುಭವಿಗಳ ಸಂಖ್ಯೆ |
| Bagalkot | 25829 |
| Ballari | 79226 |
| Bangalore Rural | 16292 |
| Belagavi | 65927 |
| Bengaluru | 64105 |
| Bidar | 51513 |
| Chamarajanagar | 28848 |
| Chikballapur | 28407 |
| Chikkamagaluru | 44534 |
| Chitradurga | 32022 |
| Dakshina Kannada | 30062 |
| Davanagere | 43672 |
| Dharwad | 22094 |
| Gadag | 20555 |
| Hassan | 11149 |
| Haveri | 54578 |

| ಪ್ರಸ್ತುತ ಇ-ಮನಿಯಾರ್ಡರ್ ಮೂಲಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಅಂಚೆ ಉಳಿತಾಯ ಖಾತೆ ತೆರೆದ ಜಿಲ್ಲಾವಾರು ವಿವರ | |
|---|---|
| Kalaburagi | 15161 |
| Kodagu | 5589 |
| Kolar | 56704 |
| Koppal | 23630 |
| Mandya | 27629 |
| Mysuru | 40229 |
| Raichur | 48666 |
| Ramanagara | 35401 |
| Shivamogga | 28598 |
| Tumakuru | 77961 |
| Udupi | 38254 |
| Uttara Kannada | 44185 |
| Vijayapura | 29147 |
| Yadgir | 6704 |
| **Total** | **10,96,671** |

ಮೇಲೆ ತಿಳಿಸಿರುವ ಪ್ರಕರಣಗಳಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.

1) ಫಲಾನುಭವಿಗಳಿಗೆ ಇ-ಮನಿಯಾರ್ಡರ್ ಬದಲಾಗಿ ಅಂಚೆ ಉಳಿತಾಯ ಖಾತೆಗೆ ಪಿಂಚಣಿ ಪಾವತಿಯಾಗುತ್ತಿರುವ ಕುರಿತು ಮಾಹಿತಿಯನ್ನು ನೀಡುವುದು.
2) ಗ್ರಾಮವಾರು ಪಟ್ಟಿಯನ್ನು ಸಂಬಂಧಪಟ್ಟ ಗ್ರಾಮಪಂಚಾಯತಿ ಕಛೇರಿಗಳ ಹಾಗೂ ನಾಡಕಛೇರಿಗಳ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸುವುದು.
3) ತಮ್ಮ ಜಿಲ್ಲೆಯ ಜಾಲತಾಣಗಳಲ್ಲಿ (ವೆಬ್ ಸೈಟ್ )ಗಳಲ್ಲಿ ಪ್ರಕಟಿಸುವುದು.

ಮುಂದುವರೆದು ಇ-ಮನಿಯಾರ್ಡರ್ ನಿಂದ ಅಂಚೆ ಉಳಿತಾಯ ಖಾತೆಗೆ ವರ್ಗಾವಣೆ ಮಾಡಲಾದ ಪ್ರತಿ ಫಲಾನುಭವಿಗೆ **"ನೇರ ಹಣ ಸಂದಾಯ ಜಾರಿ ನೋಟಿಸ್"** ಅನ್ನು ಸಿದ್ಧಪಡಿಸಲಾಗಿದ್ದು, ಸದರಿ ಮಾಹಿತಿಯನ್ನು ಅಂಚೆ ಇಲಾಖೆ ಸಿಬ್ಬಂದಿಯ ಮೂಲಕ ಫಲಾನುಭವಿಗಳಿಗೆ Delivery charges ವಿನಾಯತಿಯೊಂದಿಗೆ ತಲುಪಿಸುವಲ್ಲಿ ಉಲ್ಲೇಖದನ್ವಯ ಅಂಚೆ ಇಲಾಖೆಯೊಂದಿಗೆ ಒಮ್ಮತಕ್ಕೆ ಬರಲಾಗಿದೆ. ಅದರಂತೆ ಸದರಿ ನೋಟಿಸ್ ಪ್ರತಿಗಳ PDF File ಮಾಹಿತಿಯನ್ನು ಇ-ಮೇಲ್ ಮೂಲಕ ಕಳುಹಿಸಲಾಗುತ್ತಿದ್ದು, ನೋಟಿಸ್ ಪ್ರತಿಗಳನ್ನು ಮುದ್ರಿಸಿ ತಮ್ಮ ಜಿಲ್ಲೆಯ Superintendent of Post ಇವರಿಗೆ ನೀಡಿ ಫಲಾನುಭವಿಗಳಿಗೆ ತಲುಪಿದ ಬಗ್ಗೆ ಸ್ವೀಕೃತಿ ದಾಖಲೆ ಪಡೆದು ಸಂರಕ್ಷಿಸುವಲ್ಲಿ ಕ್ರಮವಹಿಸಲು ಕೋರಿದೆ.

ತಮ್ಮ ವಿಶ್ವಾಸಿ,
10/3
ನಿರ್ದೇಶಕರು
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ, ಬೆಂಗಳೂರು.

ಪ್ರತಿಯನ್ನು: ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ ವೃತ್ತ, ಅರಮನೆ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.